ಮಧ್ಯಂತರ ಅರ್ಜಿ ನಂ.7 ಹಾಗೂ 8 ರ ಆದೇಶದ ಮೇರೆಗೆ
ದಿಃ 17-07-2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

ಪಾಟೀ ಸವಾಲುಃ ಶ್ರೀಮತಿ ಕೆ ಎನ್ ಬಿ ಪ್ರತಿವಾದಿ ನಂ.**1,8** ರಿಂದ **11** ಮತ್ತು **15** ಪರ ವಕೀಲರಿಂದ.

ದಾವಾ ಆಸ್ತಿಯು ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ರಿ.ಸ.ನಂ.88/3 ನಾನು ಹಾಗೂ ನನ್ನ ಸಹೋದರ ಸೇರಿ ಖರೀದಿ ಹಿಡಿದ ಆಸ್ತಿ ಎಂದರೆ ಸರಿ. ದಾವಾ ಆಸ್ತಿಯನ್ನು ನಾನು ಹಾಗೂ ಪ್ರತಿವಾದಿಯೆಲ್ಲರೂ ಸೇರಿ ಸಾಗುವಳಿ ಮಾಡುತ್ತಿದ್ದೇವೆ ಎಂದರೆ ಸರಿ. ನನ್ನ ಹಾಗೂ ಪ್ರತಿವಾದಿಯರ ಮಧ್ಯೆ ದಾವಾ ಆಸ್ತಿಯ ಕುರಿತು ಯಾವುದೇ ಪಾಲು ವಿಭಾಗ ಆಗಿರುವುದಿಲ್ಲ.

ಪಾಟೀ ಸವಾಲುಃ ಶ್ರೀ ಬಿ ಟಿ ಕೆ ಪ್ರತಿವಾದಿ ನಂ.**3** ರಿಂದ **7** ಪರ ವಕೀಲರಿಂದ.

ರಿ.ಸ.ನಂ.69/1 ಅ+18 ಇದು ದೇವೆಂದ್ರಪ್ಪ ಈರಪ್ಪ ಬಡಿಗೇರ ಇವರ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ರಿ.ಸ.ನಂ.69/1 ಅ+18 ಸದರಿ ಆಸ್ತಿಯು ದೇವೆಂದ್ರಪ್ಪನ ಹೆಸರಿನಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ.ರಿ.ಸ.ನಂ.69/1 ಕ್ಷೇತ್ರ 1 ಎಕರೆ ಜಮೀನನ್ನು ಮೆಹಬೂಬಸಾಬ ಹುಸೇನಸಾಬ ನೆಗರ್ಸಿ ಇವರು ಪ್ರೇಮಾ ಕೋಂ ಸಂಗನಬಸನಗೌಡ ಪಾಟೀಲ ಇವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ನನ್ನ ತಂದೆ-ತಾಯಿ ತೀರಿಕೊಂಡಿರುತ್ತಾರೆ ಎಂದರೆ ಸರಿ. ನನ್ನ ತಂದೆತಾಯಿಗೆ ನಾವು 5 ಜನ ಗಂಡು ಮಕ್ಕಳು ಹಾಗೂ 3 ಜನ ಹೆಣ್ಣು ಮಕ್ಕಳು ಇದ್ದೇವೆ. ಅದರಲ್ಲಿ ಒಬ್ಬ ಗಂಡು ಮಗ ರಾಮಕೃಷ್ಣಪ್ಪ ಪೋತಿಯಾಗಿರುತ್ತಾರೆ. ಹಾಗೂ 2 ಹೆಣ್ಣು ಮಕ್ಕಳು ಅಂದರೆ ಕಾಳಮ್ಮ ಹಾಗೂ ದೇವಿಕಮ್ಮ ಇಬ್ಬರೂ ಪೋತಿಯಾಗಿರುತ್ತಾರೆ. ನಮ್ಮ ವಾರಸಾದಲ್ಲಿ ಇಬ್ಬರು ಹೆಣ್ಣುಮಕ್ಕಳಾದ ಕಾಳಮ್ಮ ಹಾಗೂ ದೇವಿಕಮ್ಮ ಇವರನ್ನು ತೋರಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅವರಿಬ್ಬರೂ ತೀರಿಕೊಂಡಿದ್ದರಿಂದ ನಾನು ವಾರಸಾದಲ್ಲಿ

ತೋರಿಸಿರುವುದಿಲ್ಲ ಎಂದು ಹೇಳುತ್ತಾರೆ. ಕಾಳವ್ವ 5 ನೇ ಪ್ರತಿವಾದಿಯ ಅತ್ತೆ ಎಂದರೆ ಸರಿ. 8 ನೇ ಪ್ರತಿವಾದಿಯು ಕಾಳವ್ವ ಇವರ ವಾರಸುದಾರರು ಎಂದರೆ ಸರಿ. ರಿ.ಸ.ನಂ.243/2 ಕ್ಷೇತ್ರ 7 ಎಕರೆ 12 ಗುಂಟೆ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಸದರಿ ಜಮೀನುಗಳಲ್ಲಿ 2 ಹಿಸ್ಸೆ ಇದೆ ಎಂದರೆ ಸರಿ. ಸದರಿ 2 ಹಿಸ್ಸೆಯಲ್ಲಿ 1 ನೇ ಹಿಸ್ಸೆ ಚಿದಾನಂದ ಹಾಗೂ ಇನ್ನೊಂದು ಹಿಸ್ಸೆ ದೇವೇಂದ್ರಪ್ಪ ಇವರಿಗೆ ಬರುತ್ತದೆ. ಸದರಿ ದಾವೆಯಲ್ಲಿ ಚಿದಾನಂದ ಹಾಗೂ ದೇವೇಂದ್ರಪ್ಪ ಇವರ ವಾರಸುದಾರರನ್ನು ಪಕ್ಷಗಾರರಾಗಿ ಮಾಡಿರುವುದಿಲ್ಲ ಎಂದರೆ ಸರಿ. ಸದರಿ ರಿ.ಸ.ನಂ. 243/2 ರ ಉತಾರಕ್ಕೆ ಚಿದಾನಂದ ಹಾಗೂ ದೇವೇಂದ್ರಪ್ಪ ಇವರ ಹೆಸರು ಹೊರತುಪಡಿಸಿ ಬೇರೆ ಎಲ್ಲರೂ ಹೆಸರು ದಾಖಲಾಗಿರುತ್ತವೆ ಎಂದರೆ ಸರಿ. ರಿ.ಸ.ನಂ.243/2 ಇದು ಗುಡಿ ಜಮೀನು(ದೇವಸ್ಥಾನದಿಂದ ಬಂದಂತಹ ಜಮೀನು) ಎಂದರೆ ಸರಿ. ದಿಃ 21-01-1976 ರಲ್ಲಿ ಸರಕಾರಿ ಪಟ್ಟ ತುಂಬಿದ ಮೇಲೆ ರಿ.ಸ.ನಂ.243/2 ರೈತಾಪಿ ಜಮೀನು ಆಗಿರುತ್ತದೆ ಎಂದರೆ ಸರಿ. ರೈತಾಪಿ ಜಮೀನು ಆದ ಮೇಲೆ ಸದರಿ ಜಮೀನಿನ ಮೇಲೆ ಸರಕಾರಿ ಶರತ್ತು, 15 ವರ್ಷ ಪರಾದಿನ ಮಾಡಬಾರದೆಂದು ಇತ್ತು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ರಿ.ಸ.ನಂ. 243/2 ಕ್ಷೇತ್ರ 7 ಎಕರೆ 12 ಗುಂಟೆ ಜಮೀನನ್ನು ನಾವೆಲ್ಲರುೂ ಅಫಸಾತ ವಾಟಣಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ದೇವೇಂದ್ರಪ್ಪನ ಹಿಸ್ಸೆಗೆ ಬಂದಂತಹ 3 ಎಕರೆ 26 ಗುಂಟೆ ಜಮೀನನ್ನು ವೀರಭದ್ರಪ್ಪ, ಬಸವಂತಪ್ಪ, ರಾಮಕೃಷ್ಣಪ್ಪ ಹಾಗೂ ನಾನು ಅಫಸಾತ್ ವಾಟಣಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾವು ಸದರಿ ಜಮೀನನ್ನು ಅಫಸಾತ ವಾಟಣಿ ಮಾಡಿಕೊಂಡು ನನ್ನ ಹೆಸರಿನಿಂದ ಒತ್ತಿಹಾಕಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ರಿ.ಸ.ನಂ.326/1 ಕ್ಷೇತ್ರ 1 ಎಕರೆ 28 ಗುಂಟೆ ಜಮೀನಿಗೆ ವೀರಭದ್ರಪ್ಪ, ಬಸವಂತಪ್ಪ, ರಾಮಕೃಷ್ಣಪ್ಪ ಹಾಗೂ ನನ್ನ ಹೆಸರು ಪಹಣಿ ಪತ್ರಿಕೆಯಲ್ಲಿ ಸೇರಿಸಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಪಹಣಿ ಪತ್ರಿಕೆಯನ್ನು ನಾವೇ ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇವೆ ಎಂದರೆ ಸರಿಯಲ್ಲ.

ರಿ.ಸ.ನಂ.326/1 ಜಮೀನು ಗುಡಿ ಜಮೀನು ಎಂದರೆ ಸರಿ. ನನ್ನ ಚಿಕ್ಕಮ್ಮ ಈರಮ್ಮ ಈಶ್ವರಪ್ಪ ಬಡಿಗೇರ ಪೋತಿಯಾಗಿರುತ್ತಾರೆಂದರೆ ಸರಿ. ನನ್ನ ಚಿಕ್ಕಮ್ಮನಿಗೆ ಯಾವುದೇ ಸಂತಾನ ಇರುವುದಿಲ್ಲ. 8 ನೇ ಪ್ರತಿವಾದಿ ತುಳಸವ್ವ ಇವರ ಹೆಸರು ದಾವಾ ಆಸ್ತಿಯ ಪಹಣಿ ಪತ್ರಿಕೆಗಳಲ್ಲಿ ನಮೂದು ಇದೆ ಎಂದರೆ ಸರಿ. ರಿ.ಸ.ನಂ.326/1 ಜಮೀನನಲ್ಲಿ ಪ್ರತಿವಾದಿ ನಂ. 5 ಶಕುಂತಲಾ, ಪ್ರತಿವಾದಿ ನಂ.6 ಪ್ರೇಮಾ ಹಾಗೂ ಪ್ರತಿವಾದಿ ನಂ.7 ಶಾರದಾ ಇವರಿಗೆ ಹಿಸ್ಸೆ ಇದೆ ಎಂದರೆ ಸರಿ. ಹುಲಗೂರ ಗ್ರಾಮ ಪಂಚಾಯತಿ ಆಸ್ತಿ ನಂ.25 ಹಾಗೂ 62 ರಲ್ಲಿ ಮನೆ ಇದೆ ಎಂದರೆ ಸರಿ. ರಿ.ಸನಂ.326/1 ರ ಆಸ್ತಿಗೆ ಪ್ರತಿವಾದಿಯೆಲ್ಲರೂ ಹಕ್ಕುದಾರರು ಇರುತ್ತಾರೆಂದರೆ ಸರಿ. ಅದೇ ರೀತಿ ಪ್ರತಿವಾದಿ ನಂ.9 ರಿಂದ 15 ರವರೂ ಸಹ ಹಕ್ಕುದಾರರು ಇರುತ್ತಾರೆಂದರೆ ಸರಿ. ನನ್ನ ಅಣ್ಣ ವೀರಭದ್ರಪ್ಪ ಇವರು ದಿಃ 04-05-1972 ರಂದು ರಿ.ಸ.ನಂ.88/3 ಜಮೀನಿನ ಕುರಿತು ರೂ.10,000/- ಗೆ ವೀರಭದ್ರಪ್ಪ ಸೊಬರದ ಇವರ ನಡುವೆ ಖರೀದಿ ಕರಾರು ಮಾಡಿಕೊಟ್ಟಿದ್ದರು ಎಂದರೆ ಸರಿ. ಸದರಿ ಕರಾರಿನ ಪ್ರಯುಕ್ತವಾಗಿ ರೂ.4,000/- ಗಳನ್ನು ಮುಂಗಡ ಹಣ ಕೊಟ್ಟಿದ್ದರು ಎಂದರೆ ಸರಿ. ವೀರಭದ್ರಪ್ಪ ಸೊಬರದ ಇವರು ಉಳಿದ ರೂ.6,000/- ಕೊಡದೇ ಆಗದೇ ಕಾರಣ ಖರೀದಿ ಕರಾರು ಪತ್ರವನ್ನು ರದ್ದು ಮಾಡಿಕೊಳ್ಳಲು ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿ ರಿ.ಸ.ನಂ.88/3 ಜಮೀನು ಸವಣೂರ ತಾಲೂಕಿನ ಮಾದಪೂರ ಗ್ರಾಮದ ಜಮೀನು ಎಂದರೆ ಸರಿ. ಸದರಿ ಜಮೀನಿನ ಮೂಲ ಮಾಲೀಕರು ದೇವೇಂದ್ರಪ್ಪ ವೀರಪ್ಪ ಬಡಿಗೇರ ಎಂದರೆ ಸರಿ. ದಿಃ 28-07-1939 ರಂದು ವಿಪಿಸಿ ನಂ.62 ಮನೆ ದೇವೇಂದ್ರಪ್ಪ ಮತ್ತು ಮಾನಪ್ಪ ಇವರು ಖರೀದಿ ಹಿಡಿದಿರುವ ಆಸ್ತಿ ಎಂದರೆ ಸರಿ. ಅದರ ಮೂಲ ಮಾಲೀಕರು ಪರಪ್ಪ ಮಲ್ಲಪ್ಪ ಅಗಸರ ಎಂದರೆ ಸರಿ. ನನ್ನ ಅಣ್ಣ ವೀರಭದ್ರಪ್ಪ ದಿಃ 24-08-2005 ರಂದು ಪೋತಿಯಾಗಿರುತ್ತಾರೆ ಎಂದರೆ ಸರಿ. ಪ್ರತಿವಾದಿ ನಂ.4 ರಿಂದ 7 ರವರು ನನ್ನ ಅಣ್ಣ ವೀರಭದ್ರಪ್ಪ ಇವರ ವಾರಸುದಾರರು ಎಂದರೆ ಸರಿ. ರಿ.ಸ.ನಂ.88/3 ನನ್ನ ಅಣ್ಣ ವೀರಭದ್ರಪ್ಪ ಸ್ವಂತ ಗಳಿಸಿದ ಆಸ್ತಿ ಎಂದರೆ ಸರಿಯಲ್ಲ. ಸದರಿ ಜಮೀನನ್ನು ಖರೀದಿ ಹಿಡಿಯಲು ವೀರಭದ್ರಪ್ಪನ ಹೆಂಡತಿಯ ತಂದೆ ಹಣ ಕೊಟ್ಟಿರುತ್ತಾರೆ ಎಂದರೆ

ಸರಿಯಲ್ಲ. ವೀರಭದ್ರಪ್ಪನ ಹೆಂಡತಿಯ ತಂದೆ ಹಣ ಕೊಟ್ಟಿದ್ದರೂ ಸಹ ಇಲ್ಲ ಎಂದು ಸುಳ್ಳು ಹೆಳುತ್ತಿದ್ದೇನೆ ಎಂದರ ಸರಿಯಲ್ಲ. ರಿ.ಸ.ನಂ.88/3 ನ್ನು ಖರೀದಿ ಹಿಡಿಯಲು ವೀರಭದ್ರಪ್ಪ ವಿಜಯ ಬ್ಯಾಂಕನಿಂದ ರೂ.10,000/- ಸಾಲವನ್ನು ಪಡೆದುಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಸಾಲವನ್ನು ಮರುಪಾವತಿಸಿ ಮತ್ತೆ ಅದೇ ಬ್ಯಾಂಕನಲ್ಲಿ ರೂ.2,00,000/- ಸಾಲವನ್ನು ವೀರಭದ್ರಪ್ಪ ಪಡೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲಾ. ವೀರಭದ್ರಪ್ಪ ಸಾಲ ಪಡೆದಿರುವ ಕುರಿತು ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವೀರಭದ್ರಪ್ಪ ಸಾಲ ಪಡೆಯುವ ಕುರಿತು ಗೊತ್ತಿದ್ದರೂ ಸಹ ಬ್ಯಾಂಕನಲ್ಲಿ ಹೋಗಿ ಸಾಲ ಕೊಡಬೇಡಿ ಎಂದು ಯಾವುದೇ ತಕರಾರು ಸಲ್ಲಿಸಿರುವುದಿಲ್ಲ ಎಂದರೆ ಸರಿ. ರಿ.ಸ.ನಂ.88/3 ಪಹಣಿ ಪತ್ರಿಕೆಯಲ್ಲಿ ವಿಜಯ ಬ್ಯಾಂಕನ ಬೋಜಾ ನಮೂದು ಆಗಿದೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಾನು 5 ನೇ ತರಗತಿಯವರೆಗೆ ವಿಧ್ಯಾಭಾಸ ಮಾಡಿರುತ್ತೇನೆ ಆದರೆ ನನಗೆ ಸರಿಯಾಗಿ ಓದಲು ಬರೆಯಲು ಬರುವುದಿಲ್ಲ. ಪಹಣಿ ಪತ್ರಿಕೆಯಲ್ಲಿ ಬೋಜಾ ಇರುವುದನ್ನು ನೋಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ರಿ.ಸ.ನಂ.88/3 ಪಹಣಿ ಪತ್ರಿಕೆಯನ್ನು ತೋರಿಸಿ ಅದರಲ್ಲಿ ವಿಜಯಾ ಬ್ಯಾಂಕ ಬೋಜ ಇರುವುದನ್ನು ಸಾಕ್ಷಿ ನೋಡಿ ಒಪ್ಪಿದ್ದರಿಂದ ಸದರಿ ಪಹಣಿ ಪತ್ರಿಕೆಯನ್ನು ನಿಡಿ-1 ಎಂದು ಗುರುತಿಸಲಾಯಿತು. ವೀರಭದ್ರಪ್ಪ ಬ್ಯಾಂಕಿನಲ್ಲಿ ಸಾಲ ಪಡೆಯಲು ತಕರಾರು ನೀವು ಯಾಕೆ ಸಲ್ಲಿಸಿರುವುದಿಲ್ಲ ಎಂದರೆ ರಿ.ಸ.ನಂ.88/3 ಆಸ್ತಿ ವೀರಭದ್ರಪ್ಪನ ಸ್ವಂತ ಆಸ್ತಿ ಎನ್ನುವ ಕಾರಣ ತಕರಾರು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ರಿ.ಸ.ನಂ.88/3 ಆಸ್ತಿಯಲ್ಲಿ ಪ್ರತಿವಾದಿ ನಂ.5 ರಿಂದ 7 ರವರಿಗೆ ಹಕ್ಕು ಇದೆ ಎಂದರೆ ಸರಿ. ನನ್ನ ಅಣ್ಣ ವೀರಭದ್ರಪ್ಪ ಹಾಗೂ ವೀರಪ್ಪ ಸೊಬರದ ಇವರ ಮಧ್ಯೆ ಆದ ವ್ಯವಹಾರದ ಬಗ್ಗೆ ಸಂಪೂರ್ಣ ಮಾಹಿತಿ ಇರುವುದರಿಂದ ಅದಕ್ಕೆ ಸಂಬಂದಪಟ್ಟ ದಾಖಲೆಯನ್ನು ನಿವೇ ನ್ಯಾಯಾಲಯದಲ್ಲಿ ಹಾಜರು ಪಡಿಸಿರುತ್ತೀರಿ ಎಂದರೆ ಸರಿ. ರಿ.ಸ.ನಂ.88/3 ಆಸ್ತಿಯನ್ನು ಲಪಾಟಿಸಿಕೊಳ್ಳಲು ಹಾಗೂ ಪ್ರತಿವಾದಿ ನಂ.5 ರಿಂದ 7 ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆಯನ್ನು ಮಾಡಿರುತ್ತೀರಿ ಎಂದರೆ ಸರಿಯಲ್ಲ. ಪ್ರತಿವಾದಿ ನಂ.5 ರಿಂದ 7 ರವರಿಗೆ ಸುಳ್ಳು ದಾವೆ

ಸಲ್ಲಿಸಿ ಮಾನಸಿಕವಾಗಿ ತೊಂದರೆ ಕೊಟ್ಟಿದ್ದರಿಂದ ರೂ.50,000/- ಪರಿಹಾರವನ್ನು ಕೊಡುವ ಬಾಧ್ಯತೆ ನಿಮ್ಮ ಮೇಲೆ ಇದೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ ಹೆ ಕೆ ಸರಿ ಅದೆ.

ಸಿವಿಲ್ ನ್ಯಾಯಾಧೀಶರು, ಶಿಗ್ಗಾಂವ.

ಓ. ಎಸ್. ನಂಃ 217-2013

ಪಿ. ಡಬ್ಲ್ಯೂಃ 2

ದಿಃ 17-07-2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀ ಎಸ್ ಎನ್ ಕೆ ವಾದಿ ಪರ ವಕೀಲರಿಂದ**.**

ಈ ದಾವೆಯಲ್ಲಿ ನಾನು ಸಾಕ್ಷಿದಾರನಾಗಿದ್ದು, ಇಂದು ನನ್ನ ವೌಖಿಕ ಸಾಕ್ಷ್ಯದ ಬದಲು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದ ಎಲ್ಲ ವಿಷಯಗಳು ನಿಜ ವ ಸತ್ಯ ಇರುತ್ತವೆ

ಪಾಟೀ ಸವಾಲುಃ ಶ್ರೀಮತಿ ಕೆ ಎನ್ ಬಿ ಪ್ರತಿವಾದಿ ನಂ**.1,8** ರಿಂದ **11** ಮತ್ತು **15** ಪರ ವಕೀಲರಿಂದ**.**

ದಾವಾ ಆಸ್ತಿಯು ವಾದಿ ಹಾಗೂ ಪ್ರತಿವಾದಿಯರ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ದಾವಾ ಆಸ್ತಿಯನ್ನು ವಾದಿ ಹಾಗೂ ಪ್ರತಿವಾದಿಯೆಲ್ಲರೂ ಸೇರಿ ಸಾಗುವಳಿ ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ವಾದಿ ಹಾಗೂ ಪ್ರತಿವಾದಿಯರ ನಡುವೆ ವಿಭಜನೆ ಆಗಿರುವುದಿಲ್ಲ ಎಂದರೆ ಸರಿ. ರಿ.ಸ.ನಂ.88/3 ಆಸ್ತಿಯನ್ನು ವೀರಭದ್ರಪ್ಪ ಹಾಗೂ ಅವರ ಕುಟುಂಬದವರು ಸೇರಿ ಹಿಡಿದಂತಹ ಏಕತ್ರ ಘರಾಣೆ ಆಸ್ತಿ ಎಂದರೆ ಸರಿ.

ಪಾಟೀ ಸವಾಲುಃ ಶ್ರೀ ಬಿ ಟಿ ಕೆ ಪ್ರತಿವಾದಿ ನಂ**.3** ರಿಂದ **7** ಪರ ವಕೀಲರು ಸಮಯ ಕೋರಿದ್ದರಿಂದ ಪಾಟೀ ಸವಾಲು ಮುಂದೂಡಲಾಯಿತು

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ ಹೆ ಕೆ ಸರಿ ಅದೆ.

ಸಿವಿಲ್ ನ್ಯಾಯಾಧೀಶರು, ಶಿಗ್ಗಾಂವ.

ಓ. ಎಸ್. ನಂಃ 217-2013

ಪಿ. ಡಬ್ಲ್ಯೂಃ 3

ದಿಃ 17-07-2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀ ಎಸ್ ಎನ್ ಕೆ ವಾದಿ ಪರ ವಕೀಲರಿಂದ.

ಈ ದಾವೆಯಲ್ಲಿ ನಾನು ಸಾಕ್ಷಿದಾರನಾಗಿದ್ದು, ಇಂದು ನನ್ನ ಮೌಖಿಕ ಸಾಕ್ಷ್ಯದ ಬದಲು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದ ಎಲ್ಲ ವಿಷಯಗಳು ನಿಜ ವ ಸತ್ಯ ಇರುತ್ತವೆ

ಪಾಟೀ ಸವಾಲುಃ ಶ್ರೀಮತಿ ಕೆ ಎನ್ ಬಿ ಪ್ರತಿವಾದಿ ನಂ.**1,8** ರಿಂದ **11** ಮತ್ತು **15** ಪರ ವಕೀಲರಿಂದ.

ದಾವಾ ಆಸ್ತಿಯು ವಾದಿ ಹಾಗೂ ಪ್ರತಿವಾದಿಯರ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ದಾವಾ ಆಸ್ತಿಯನ್ನು ವಾದಿ ಹಾಗೂ ಪ್ರತಿವಾದಿಯೆಲ್ಲರೂ ಸೇರಿ ಸಾಗುವಳಿ ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ವಾದಿ ಹಾಗೂ ಪ್ರತಿವಾದಿಯರ ನಡುವೆ ವಿಭಜನೆ ಆಗಿರುವುದಿಲ್ಲ ಎಂದರೆ ಸರಿ. ರಿ.ಸ.ನಂ.88/3 ಆಸ್ತಿಯನ್ನು ವೀರಭದ್ರಪ್ಪ ಹಾಗೂ ಅವರ ಕುಟುಂಬದವರು ಸೇರಿ ಹಿಡಿದಂತಹ ಏಕತ್ರ ಘರಾಣೆ ಆಸ್ತಿ ಎಂದರೆ ಸರಿ.

ಪಾಟೀ ಸವಾಲುಃ ಶ್ರೀ ಬಿ ಟಿ ಕೆ ಪ್ರತಿವಾದಿ ನಂ.**3** ರಿಂದ **7** ಪರ ವಕೀಲರು ಸಮಯ ಕೋರಿದ್ದರಿಂದ ಪಾಟೀ ಸವಾಲು ಮುಂದೂಡಲಾಯಿತು

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ ಹೆ ಕೆ ಸರಿ ಅದೆ.

ಸಿವಿಲ್ ನ್ಯಾಯಾಧೀಶರು, ಶಿಗ್ಗಾಂವ.